

# ಹನುಮನ ನೋಡಿದಿರಾ?

**ರಾಜಸ್ಥಾನದ 'ಅಂಜನಾ' ಗ್ರಾಮ ಹನುಮಂತನ ಜನ್ಮ ಸ್ಥಳ ಎನ್ನುವುದು ಅಲ್ಲಿಯವರ ನಂಬಿಕೆ. ಹನುಮನ ಜೊತೆಗೆ ತಳಕು ಹಾಕಿಕೊಂಡಿರುವ ಈ ಊರಿಗೆ ಸಮೀಪದಲ್ಲೇ ಚಾರಿತ್ರಿಕ ಮಹತ್ವದ ದೇವಘಡವೂ ಇದೆ.**

■ **ಪ್ರಶಾಂತ ಹೊಸಮನಿ**

ರಾಮಾಯಣದ ಆಂಜನೇಯನ ಮೂಲಸ್ಥಾನದ ಕುರಿತು ಸಾಕಷ್ಟು ಕಥೆಗಳಿವೆ. ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಂಗಾವತಿ ಬಳಿ ಇರುವ ಅಂಜನಾದ್ರಿ ಬೆಟ್ಟದೊಂದಿಗೆ ಹನುಮನ ನಂಟಿನ ಕಥೆಗಳಿವೆ. ಅಂತಹದೇ ಇನ್ನೊಂದು ಸ್ಥಳ–ಮೂಲದ ಐತಿಹ್ಯ ರಾಜಸ್ಥಾನದಲ್ಲಿದೆ.

ರಾಜಸ್ಥಾನದ ರಾಜಸ್ಮಂಡ ಜಿಲ್ಲೆಯ ದೇವಘರ ಎಂಬ ಪಟ್ಟಣದ ಬಳಿ 'ಅಂಜನಾ' ಎನ್ನುವ ಊರಿದೆ. ಇದು ದೇವಘರ ಪಟ್ಟಣದಿಂದ 7 ಕಿ.ಮೀ. ದೂರದಲ್ಲಿದೆ. ಆಂಜನೇಯ ಇಲ್ಲಿ ಜನಿಸಿದ ಕಾರಣದಿಂದಾಗಿ ಊರಿಗೆ 'ಅಂಜನಾ' ಎನ್ನುವ ಹೆಸರು ಬಂತೆಂದು ಸ್ಥಳೀಯರು ಹೇಳುತ್ತಾರೆ.

ಅಂಜನಾ ಗ್ರಾಮದಲ್ಲಿ ಬೃಹದಾಕಾರದ ಕಪ್ಪು ಕಲ್ಲಿನ ಗುಹೆಯಿದೆ. ಈ ಗುಹೆಯಲ್ಲೇ ದೇವಾಲಯವಿದೆ. ಸಾವಿರಾರು ವರ್ಷಗಳ ಹಿಂದೆ ನಿರ್ಮಾಣವಾದ ಈ ಗುಹಾಮಂದಿರವನ್ನು ದೇವಘರದ ಮಹಾರಾಜರು ನಿರ್ಮಿಸಿದರೆಂದೂ, ಅದಕ್ಕೆ ಮುನ್ನ ಇಲ್ಲಿ ಕೇವಲ ಗುಹೆ ಇತ್ತು ಎನ್ನಲಾಗುತ್ತದೆ. ಈ ಗುಹೆ ಭೂಮಿ ಉಗಮವಾಗಿದಾಗಿನಿಂದಲೂ ಇದೆ ಎನ್ನುವುದು ಸ್ಥಳೀಯರ ನಂಬಿಕೆ.

ಶಿಲಾಯುಗ ಕಾಲದ ಗುಹಾಲಯವೆಂಬಂತೆ ಭಾಸವಾಗುವ ಏಕಶಿಲೆಯ ಹನುಮನ ಗುಹಾಂತರ ದೇವಾಲಯ ಅಜಂತಾ ಎಲ್ಲೋರಾವನ್ನು ನೆನಪಿಸುತ್ತದೆ. ಆದರೆ, ಅಜಂತಾಗೆ ಹೋಲಿಸಿದರೆ ಕಲೆಯ ಪ್ರಮಾಣ ಇಲ್ಲಿ ತೀರಾ ಕಡಿಮೆ. ಈ ಗುಹಾಂತರ ದೇವಾಲಯದಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳಕಿನ ವ್ಯವಸ್ಥೆ ಮಾಡಿದ್ದರೂ ದಟ್ಟ ಕತ್ತಲೆಯ ಅನುಭವ ಕೆಲವೆಡೆ ಆಗುತ್ತದೆ. ಗುಹೆಯಲ್ಲಿ ಬಾವಲಿಗಳೂ ಇವೆ.



ಆಕರ್ಷಕ ರೂಪದ 'ಅಂಜನಾ ಮಹಾದೇವ' ಹೆಸರಿನ ಮೂರ್ತಿ ಮಂದಿರದಲ್ಲಿದೆ. ಈ ಮಂದಿರಕ್ಕೆ 30 ಮೀಟರ್ ದೂರದಲ್ಲಿ ಮತ್ತೊಂದು ಗುಹಾಮಂದಿರವಿದೆ. ಅಲ್ಲಿ ಹನುಮನ ತಾಯಿ ಅಂಜನಾದೇವಿಯ ಮೂರ್ತಿಯಿದೆ.

ದೇವಾಲಯದ ಪಕ್ಕದಲ್ಲಿ ಸುಂದರವಾದ ಪುಷ್ಕರಣಿಯಿದೆ. ಪುರಾತನ ಕಾಲದ ಈ ಪುಷ್ಕರಣಿಯ ಜೀರ್ಣೋದ್ಧಾರ ನಡೆದಿದೆ. ದಿವ್ಯಶಕ್ತಿ ಹೊಂದಿರುವ ಪುಷ್ಕರಣಿಯ ನೀರಿಗೆ ರೋಗಗಳನ್ನು ಪರಿಹರಿಸುವ ಶಕ್ತಿಯಿದೆ ಎನ್ನುವುದು ಭಕ್ತರ ನಂಬಿಕೆ.

ಅಂಜನಾ ಗ್ರಾಮಕ್ಕೆ ಹೋದವರು ದೇವಘಡದಲ್ಲಿನ 'ದೇವಘಡ ಮಹಲ್'ಗೂ ಭೇಟಿ ಕೊಡಬಹುದು. 17ನೇ ಶತಮಾನದ ಈ ಅರಮನೆ ದೇವಘಡದ ರಾವಲ್ ನಹರ್ ಸಿಂಗ್ ಮಹಾರಾಜರದು. ಮೂರು ವರ್ಷಗಳ ಹಿಂದೆ ರಾಜಮನೆತದವರು ಈ ಅರಮನೆಯನ್ನು ರೆಸಾರ್ಟ್ ಆಗಿ ಬದಲಿಸಿದ್ದು, ವಿದೇಶಿ ಪ್ರವಾಸಿಗರ ಪಾಲಿಗದು ಆಕರ್ಷಕ ಕೇಂದ್ರವಾಗಿದೆ. ಜನಸಾಮಾನ್ಯರ ಪಾಲಿಗೆ ಅರಮನೆಯ ಹೊರಭಾಗವಷ್ಟೇ ವೀಕ್ಷಣೆಗೆ ಲಭ್ಯ. ■